# REPUBLIC DAY CELEBRATION

## 26-01-2023






ಅಹಿಂಸೆಯ ಮೂಲಕ ಸ್ವತಂತ್ರ ಪಡೆದ ವಿಶ್ವದ ಏಕೈಕ ರಾಷ್ಟ್ರ ಭಾರತ

ಪ್ರೊ.ಕೆ.ಎಸ್.ಸುರೇಶ್

ದಿನಾಂಕ:26.01.2023ರಂದು ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ 74ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜೆ.ಎಸ್.ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ.ಕೆ.ಎಸ್.ಸುರೇಶ್ ಅವರು ಮಾತನಾಡುತ್ತಾ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ಸಮಯದಲ್ಲೂ ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡಂತಹ ಪ್ರಪಂಚದ ಏಕೈಕ ರಾಷ್ಟ್ರ ಭಾರತವಾಗಿದೆ. ಆದರೆ ರಕ್ತ ಹರಿಸದೇ ಸ್ವತಂತ್ರ್ಯ ಪಡೆದ ಭಾರತ ಸ್ವತಂತ್ರ್ಯ ನಂತರ ರಕ್ತ ಹರಿಸುತ್ತಿರುವುದು ದುರಂತವೇ ಆಗಿದೆ. ಬ್ರಿಟೀಷರು 45 ಲಕ್ಷ ಕೋಟಿ ಹಣವನ್ನು ಭಾರತದಿಂದ ದೋಚಿಕೊಂಡು ಹೋದರೂ ಸಹ ಭಾರತ ಶ್ರೀಮಂತ ರಾಷ್ಟ್ರವೇ, ಕಾರಣ ಪ್ರಪಂಚದ ಏಳು ಸಾವಿರ ಭಾಷೆಗಳಲ್ಲಿ ಮೂರು ಸಾವಿರ ಭಾಷೆಗಳು ಭಾರತದಲ್ಲೇ ನೆಲೆಗೊಂಡಿವೆ ಇದೇ ಭಾರತದ ಶ್ರೀಮಂತಿಕೆ. ಪ್ರತಿ ಸಾವಿರ ಮೀಟರ್‌ಗೂ ಸಂಸ್ಕೃತಿ ಬದಲಾಗುವುದನ್ನು ನಾವು ಕಾಣಬಹುದಾಗಿದೆ. ಡಾ. ಅಬ್ದುಲ್ ಕಲಾಂ ಅವರು ಹೇಳಿರುವಂತೆ ಒಂದು ದೇಶದ ಉನ್ನತಿಗೆ ಮೂರು ವ್ಯಕ್ತಿಗಳು ಪ್ರಮುಖ ಕಾರಣಕರ್ತರು. ಅವರುಗಳೆಂದರೆ ತಾಯಿ, ತಂದೆ ಮತ್ತು ಗುರು. ಪ್ರತಿಯೊಬ್ಬ ಪ್ರಜೆಗೂ ದೇಶದ ಬಗ್ಗೆ ಕಾಳಜಿಯನ್ನು ಅಗತ್ಯವಾಗಿ ಬೆಳೆಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾವರ್ಧಕ ಸಂಘದ ಗೌರವ ಖಜಾಂಚಿಗಳಾದ ಶ್ರೀ.ಶ್ರೀಶೈಲರಾಮಣ್ಣವರ್ ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿಯ ಗೌರವ ಸದಸ್ಯರಾದ ಶ್ರೀ.ಎಸ್.ಶಿವಲಿಂಗಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ, ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ದೀಪು, ಸಂಯುಕ್ತ ಪದವಿ ಪೂರ್ವ ಕಾಲೇಜನ ಪ್ರಾಂಶುಪಾಲರಾದ ಶ್ರೀ.ಸಿದ್ದಯ್ಯ ಅವರು, ಪ್ರೌಢಶಾಲೆ ಮುಖ್ಯಸ್ಥರಾದ ಶ್ರೀ.ಸುರೇಶ್.ಕೆ.ಎಂ ಅವರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಪ್ರೌಢಶಾಲೆಯ ಶ್ರೀ.ಪುಟ್ಟೇಗೌಡ.ಎಂ.ವೈ ಅವರು ನಿರೂಪಿಸಿದರು. ಕು.ಮಹಾಲಕ್ಷ್ಮಿ ಪ್ರಾರ್ಥಿಸಿದ ಕಾರ್ಯಕ್ರಮವನ್ನು ಪ್ರೊ.ಮೋಹನ್ ಕುಮಾರ್ ಎನ್. ಸ್ವಾಗತಿಸಿ, ಕು.ಶಫಿಯಾ ವಂದಿಸಿದರು




ರಂಗ ಮಂಟಪ


ರಂಗ ಮಂಟಪ












VIDYAVARDHAKA FIRST GRADE COLLEGE


















ರಂಗ ಮಂಟಪ








STAFF TWO WHEELER
PARKING




























vardhaka Sangha (R),Mysuru















